


ಎಡದಿಂದ ಬಲಕ್ಕೆ:

1. ಈ ಬಗೆಯ ಆರೋಪ ಬಹಳ ವಿರಳ, ಬಿಡಿ 4
3. ಕಾರ್ಮಿಕರ ಈ ಗುಂಪಿನಲ್ಲಿ ಕುಲುಮೆ ಕೆಲಸಗಾರ ಯಾರು? 3
4. ಕುರಿಮರಿ ಬಿದ್ದ ಆಳ ಹಳ್ಳವೇ ಹಿಂದು ಮುಂದು 3
6. ಅವನು ಒಬ್ಬನೇ ಮಾಡಿದ್ದು ಈ ಭಾಷಾಂತರದ ಕೆಲಸ 4
7. ರಹಸ್ಯವೇನಿಲ್ಲ; ಅದು ಬಾಳೆಬೆಲ್ಲಗಳ ಮಿಶ್ರಣ 4
9. ನಗು ನಗುತ್ತಲೇ ಹಾರಿ ಹಾರಿ ಹಳ್ಳ ದಾಟುವ ಕ್ರೀಡೆ 4
12. ಸಭ್ಯನಾದವನೇ ಹೌದಾದರೂ ಮನದಲ್ಲಿ ಸದಾ ಆತ್ಮಗೌರವ 4
14. ತ್ಯಾಜ್ಯ ವಸ್ತುಗಳನ್ನು ಇರಿಸಲು ಇಂಥ ಸುಭದ್ರ ಪೆಟ್ಟಿಗೆ ಬೇಕೇ? 3
15. ತಾವರೆಗಳನ್ನಿರಿಸಿದ ಪ್ರದೇಶ ಸಂಪೂರ್ಣ ಗಾಳಿ ರಹಿತ 3
16. ಈ ಕಾಷ್ಠ ಶಿಲ್ಪದಲ್ಲಿ ಕಾಣಬಹುದು ಕೌಶಲ್ಯದ ಉತ್ತುಂಗ 4

ಮೇಲಿಂದ ಕೆಳಕ್ಕೆ:

1. ಅವರಿಂದ ಸ್ವಲ್ಪ ಬದಲಿಸಿದರೂ ಸಿಕ್ಕೀತು ತಾವರೆ 4
2. ಇದು ಆ ಊರಿನ ಪ್ರಸಿದ್ಧ ವ್ಯಾಪಾರಿಯ ಬಂಧು ಮಿತ್ರರ ಬಳಗ 4
3. ಮೂರ್ಖರನ್ನೂ ಆಕರ್ಷಿಸುವಷ್ಟು ಸುಂದರ ಈ ಅರ್ಧ ಚಂದ್ರಕಾರ 3
5. ಆತ ಎಲ್ಲರಿಗೂ ನೀಡಿದ ಕೊಡುಗೆಯೇ ಇದು ಅಗಲ ಬಾಯಿಯ ಭಾರೀ ಪಾತ್ರೆ 3
6. ಉತ್ತಮ ಸಹವಾಸವನ್ನೆಲ್ಲ ದೂರ ಮಾಡಿದ್ದು ತಾಳ್ಮೆಯೇ ಇಲ್ಲದ ಆತನ ಸ್ವಭಾವ 4
8. ಹೊಸ ವಿಮಾನವನ್ನುಕೊಳ್ಳುವ ಮೊದಲು ಒಂಬತ್ತು ಅಳತೆ 4
10. ಅದೇಕೋ ಗೋಳಾಡುತ್ತಿದ್ದಾಳೆ ಆಕೆಯ ಸ್ನೇಹಿತೆ 3
11. ಪಟ ಹಾರಿಸುವ ಪಾರಂಪರಿಕ ರೂಢಿ ಇಲ್ಲಿ ಬುಡಮೇಲು 4
12. ಕಷ್ಟ ಏನೇ ಬರಲಿ, ಒಡೆಯನ ಮೇಲಿರುವ ಭಕ್ತಿ ಶ್ವಾನದಂತೆ ಅಚಲ 4
13. ಬೃಹತ್ ಮೂರ್ತಿಯನ್ನೂ ಅಲುಗಿಸಿತ್ತು ಮಳೆಗಾಳಿ 3

---

## 08 – 07– 2021 ಉತ್ತರಗಳು

ಎಡದಿಂದ ಬಲಕ್ಕೆ:

1. ವನೌಷಧ 3. ಕುಮುದ 4. ನಿರ್ಧಾರ 6. ನಳಪಾಕ 7. ನಿರ್ಮೂಲನ 9. ಹಾನಿಕರ 11. ನಡುದಾರಿ 13. ದಿವಸ್ಪತಿ 15. ಕಾರಕೂನ 17. ರಜಾಯಿ 18. ವಸನ 19. ಸುಧಾರಣೆ

ಮೇಲಿಂದ ಕೆಳಕ್ಕೆ:

1. ವದನ 2. ಧನಿಕ 3. ಕುಶಲ 5. ರಜನಿ 7. ನಿರಶನ 8. ನವಸಿರಿ 9. ಹಾದಿಬದಿ 10. ರಣನೀತಿ 12. ದಾತಾರ 14. ವಚನ 15. ಕಾಯಿಸಿ 16. ನವಣೆ

ಪ್ರಶ್ನಾಂಕಣ

# ತಾಳೆಪೃಥ್ವಿ ನಾಶಕ ಬೆಳೆ: ಹೇಗೆ?

ತಾಳೆ. ಅದು ಸದ್ಯದ ಒಂದು ಅತ್ಯಂತ ಲಾಭದಾಯಕ ಬೆಳೆ. ತಾಳೆ ಸಸ್ಯದಿಂದ (ಚಿತ್ರ1) ಸುಲಭವಾಗಿ ಪಡೆಯಬಹುದಾದ 'ತಾಳೆ ಎಣ್ಣೆ' (ಪಾಮ್ ಆಯಿಲ್) ಜಗತ್ತಿನ ಅತ್ಯಂತ ಅಗ್ಗದ, ಬಹು ವಿಧ ಉಪಯೋಗಿಯಾದ, ಹಾಗಾಗಿ ಬಹಳ ಬೇಡಿಕೆಯ ತೈಲ. ಸಕಲ ವಿಧ ಸಸ್ಯ ಮೂಲ ತೈಲಗಳಲ್ಲೂ ತಾಳೆ ಎಣ್ಣೆಯದೇ ಗರಿಷ್ಠ ಬಳಕೆ. ಪ್ರಸ್ತುತ ಜಗದಾದ್ಯಂತ ಅದರ ಒಟ್ಟು ವಾರ್ಷಿಕ ಬಳಕೆ ಎಪ್ಪತ್ತೈದು ದಶಲಕ್ಷ ಟನ್! ಅಡುಗೆ ಮನೆಗಳಿಂದ ತೊಡಗಿ ಎಣ್ಣೆ ವನಸ್ಪತಿಗಳನ್ನು ಬಳಸುವ ಸರ್ವ ವಿಧ 'ಬೇಕರಿ ತಿಂಡಿ'ಗಳಲ್ಲಿ, ಸೌಂದರ್ಯ ವರ್ಧಕ ತಯಾರಿಗಳಲ್ಲಿ, ಸೋಪು ಶಾಂಪೂಗಳಲ್ಲಿ... ಕಡೆಗೆ 'ಜೈವಿಕ ಇಂಧನ'ದಲ್ಲೂ ಈ ಎಣ್ಣೆಯದು ಧಾರಾಳ ಬಳಕೆ.

ಹಾಗೆಂದು 'ಅತಿ ಕಡಿಮೆ ಬೆಲೆಯ ಅತ್ಯುಪಯುಕ್ತ ವಸ್ತು' ಎಂದು ತಾಳೆ ಎಣ್ಣೆಯನ್ನು ಮೆಚ್ಚುವಂತಿಲ್ಲ. ಏಕೆಂದರೆ ವಾಣಿಜ್ಯ ಬೆಳೆಯಾಗಿ ತಾಳೆ ಕೃಷಿ ಇಡೀ ಪೃಥ್ವಿಗೇ ಹಾನಿಕಾರಕ. ಹೇಗೆಂದು ನೀವೇ ನೋಡಿ:

ಭೂಮಿಯ 'ಸಮಭಾಜಕ ರೇಖೆ'ಯ ಮೇಲೆ ಮತ್ತು ಕೆಳಗೆ 10 ಡಿಗ್ರಿವರೆಗಿನ ಅಕ್ಷಾಂಶಗಳ ವರೆಗಿನ ನೆಲ ಪ್ರದೇಶವೇ ತಾಳೆ ಕೃಷಿಗೆ ಅತ್ಯಂತ ಪ್ರಶಸ್ತ. ದೌರ್ಭಾಗ್ಯ ಏನೆಂದರೆ ಇದೇ ಪ್ರದೇಶದಲ್ಲೇ ಧರೆಯ ಬಹುಪಾಲು 'ವೃಷ್ಟಿ ವನ'ಗಳು ನೆಲೆಗೊಂಡಿವೆ. ನಿಮಗೇ ತಿಳಿದಂತೆ ವೃಷ್ಟಿ ವನ ಅಥವಾ ಮಳೆ ಕಾಡು ಪೃಥ್ವಿಯ ಅತಿ ನಿಬಿಡ, ಅತ್ಯುತ್ಕೃಷ್ಟ, ಅತ್ಯಮೂಲ್ಯ ನಿಧಿ. ಧರೆಯ ನೆಲಾವಾರದ ಶೇಕಡ 10ರಷ್ಟೇ ವಿಸ್ತಾರದಷ್ಟು ಉಳಿದಿರುವ ವೃಷ್ಟಿವನಗಳಲ್ಲಿ ಇಡೀ ಇಳೆಯ ಶೇಕಡ 50 ಕ್ಕೂ ಅಧಿಕ ಸಸ್ಯ ಮತ್ತು ಪ್ರಾಣಿ ಪ್ರಭೇದಗಳು ದಟ್ಟೈಸಿವೆ. ಇಂಥ ಅನನ್ಯ ಅತ್ಯದ್ಭುತ ಜೀವಾವಾರ ತಾಳೆ ಬೆಳೆಗಾಗಿ ದಿನೇ ದಿನೇ ಕ್ಷೀಣಿಸುತ್ತಿದೆ. ಹೊಸ ಹೊಸ ತಾಳೆ ಗಿಡ ಪ್ಲಾಂಟೇಷನ್ ಗಳನ್ನು (ಚಿತ್ರ 2) ರೂಪಿಸಲೆಂದು ಪ್ರತಿ ದಿನ ಹಗಲೂ ಇರುಳೂ ಪ್ರತಿ ಸೆಕೆಂಡ್ ಗೆ ಸಮೀಪ ಏಳು ಎಕರೆಗಳಷ್ಟು ವೃಷ್ಟಿವನವನ್ನು ಕಡಿದು ಹಾಕಲಾಗುತ್ತಿದೆ (ಚಿತ್ರ3). ಹಾಗೆ ಈ ವರೆಗೆ ತಾಳೆ ಬೆಳೆಗಾಗಿ ಮೂರು ಲಕ್ಷ ಚದರ ಕಿಲೋ ಮೀಟರ್ ಗೂ ಹೆಚ್ಚು ವೃಷ್ಟಿವನ ನೆಲಸಮವಾಗಿದೆ. ಸಹಜವಾಗಿಯೇ ಮಳೆಕಾಡುಗಳನ್ನು ಆಶ್ರಯಿಸಿರುವ ಜೀವಜಾಲವಿಡೀ ಭಾರೀ ತಳಮಳಕ್ಕೆ ಸಿಲುಕಿದೆ.




ಧರೆಯ ಮಳೆ ಚಕ್ರದ ಸ್ವಾಸ್ಥ್ಯದಲ್ಲಿ, ವಾಯುಮಂಡಲದ ಇಂಗಾಲದ ಡೈ ಆಕ್ಸೈಡ್ ಅನ್ನು ಹೀರಿಕೊಳ್ಳುವಲ್ಲಿ... ಹಾಗೆಲ್ಲ ಹಲವಾರು ಭೂ ರಕ್ಷಕ ವಿದ್ಯಮಾನಗಳ ಸುಗಮ ಚಾಲನೆಯಲ್ಲಿ ವೃಷ್ಟಿವನಗಳದು ಬಹಳ ಪ್ರಧಾನ ಪಾತ್ರ. ತಾಳೆ ಎಣ್ಣೆಯ ಜಾಗತಿಕ ದಾಹ ಇವೆಲ್ಲವನ್ನೂ ಅಧ್ವಾನಗೊಳಿಸುತ್ತಿದೆ. ಅಷ್ಟೇ ಅಲ್ಲದೆ, ತಾಳೆ ತೋಟಗಳಿಗಾಗಿ ಕಡಿಯಲಾಗುತ್ತಿರುವ ಮಳೆ ಕಾಡುಗಳ ನೆಲದ ಮಣ್ಣಿನಲ್ಲಿ ಸಾವಿರಾರು ವರ್ಷಗಳಿಂದ ಇಂಗಾಲದ ಡೈ ಆಕ್ಸೈಡ್ ಭರಿತ 'ಜೈವಿಕ ರಾಶಿ' ಭಾರೀ ಪ್ರಮಾಣದಲ್ಲಿ ಸಂಗ್ರಹವಾಗಿದೆ. ಅಡವಿಗಳನ್ನು ಕೆಡವಿದಲ್ಲೆಲ್ಲ ನೆಲದ ಈ ಅನಿಲ ವಾಯುಮಂಡಲಕ್ಕೆ ಸೇರುತ್ತಿದೆ; ವಾತಾವರಣವನ್ನು ಹದಗೆಡಿಸುತ್ತಿದೆ.

ಆದ್ದರಿಂದಲೇ ತಾಳೆ ಎಣ್ಣೆ ಪೃಥ್ವಿನಾಶಕ ಉತ್ಪನ್ನ. ಇದನ್ನರಿತ ಶ್ರೀಲಂಕಾದಂಥ ರಾಷ್ಟ್ರಗಳು ತಾಳೆ ಎಣ್ಣೆಯ ಬಳಕೆಯನ್ನು ನಿಷೇಧಿಸಿವೆ. ತದ್ವಿರುದ್ಧವಾಗಿ ತಾಳೆ ಎಣ್ಣೆಯ ಬಳಕೆಯಲ್ಲಿ ನಮ್ಮ ದೇಶದ್ದೇ ಪ್ರಥಮ ಸ್ಥಾನ; ನಮ್ಮಲ್ಲಾಗುತ್ತಿರುವ ವಾರ್ಷಿಕ ಬಳಕೆ 8.4 ದಶ ಲಕ್ಷ ಟನ್!

■ ಎನ್. ವಾಸುದೇವ್